**CC 54/2017**
**PW.8**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**
**ದೊಡ್ಡಬಳ್ಳಾಪುರ**
**ಸಿ ಸಿ ನಂ : 54/2017**

**ಪಿ ಡಬ್ಲ್ಯೂ - 8**
**ಸಿ ಡಬ್ಲ್ಯೂ - 7**

**ದಿಃ 23.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ತಿಮ್ಮಪ್ಪ**
**ತಂದೆಯ ಹೆಸರು ಃ ಲೇಟ್ ಹುಚ್ಚಯ್ಯ**
**ವಯಸ್ಸು ಃ 53 ವರ್ಷ**
**ಉದ್ಯೋಗ ಃ ಭೂಮಾಪಕರು**
**ವಿಳಾಸ ಃ ಮುಪ್ಪಡಿಘಟ್ಟ, ದೊಡ್ಡಬಳ್ಳಾಪುರ ತಾಲ್ಲೂಕು**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದ**

ನಾನು 2009 ರಿಂದ 2019ರ ವರೆಗೂ ನಾನು ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಭೂಮಾಪಕನಾಗಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದೊಡ್ಡಬೆಳವಂಗಲ ಹೋಬಳಿ, ಚಿಕ್ಕಹೆಜ್ಜಾಜಿ ಕಾಲೋನಿಯಲ್ಲಿದ್ದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಸೇರಿದ ಸರ್ವೇ ನಂ. 14ರಲ್ಲಿನ ಜಾಗವನ್ನು ಸರ್ಕಾರಿ ಶಾಲೆಯ ಕಟ್ಟಡ ಆವರಣಕ್ಕಾಗಿ ಮಂಜೂರಾಗಿದ್ದು, ಸದರಿ ಜಾಗವನ್ನು ಅಳತೆ ಮಾಡಿಕೊಡುವಂತೆ ಶಾಲೆಯ ಮುಖ್ಯಸ್ಥರು ಕೋರಿಕೊಂಡಿದ್ದರು ಅದರಂತೆ ನಾನು ನಕ್ಷೆಯನ್ನು ತಯಾರಿಸಿ ತಹಶೀಲ್ದಾರ್ ಕಛೇರಿಗೆ ವರದಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ನಿಪಿ-6ರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎ.ಎನ್.ಎಸ್., ವಕೀಲರಿಂದ**

ಸರ್ವೇ ನಂ. 14ರ ಸ್ಕೆಚ್ ತಯಾರಿಸುವ ಪೂರ್ವದಲ್ಲಿ ಆಜುಬಾಜು ಜಮೀನುದಾರರಿಗೆ ನೋಟೀಸ್‌ನ್ನು ಕೊಟ್ಟಿರಲಿಲ್ಲ. ನಿಪಿ-6 ರಲ್ಲಿ ನಕ್ಷೆ ತಯಾರಿಸಿದ ದಿನಾಂಕ ನಮೂದಿಸಿಲ್ಲ ಎಂದರೆ ಸರಿ. ನಿಪಿ-6 ರಲ್ಲಿ ಜಾಗ ಒತ್ತುವರಿಯಾಗಿದೆ ಎಂದು ಬರೆದಿರುವುದಿಲ್ಲ ಎಂದರೆ ಸರಿ. ಪೋಲೀಸರಿಗೆ ನಾನು ಜಮೀನು ಒತ್ತುವರಿಯಾಗಿದೆ ಎಂದು ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿ. ನಾನು ಯಾವುದೇ ನಿಯಮಗಳನ್ನು ಪಾಲಿಸದೆ ನಕ್ಷೆಯನ್ನು ತಯಾರಿಸಿ ಈ ಪ್ರಕರಣಕ್ಕಾಗಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನ ರೀತ್ಯ ಬೆರಳಚ್ಚುಗಾರರಿಂದ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**